# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ

## ಸಿ.ಸಿಃ 567/2025

ಫ್ರಾಸಾ-2, ಚಾಸಾ-4

ಸಾಕ್ಷಿದಾರರ ಹೆಸರು : ಪ್ರದೀಪ್ ಕೆಎಸ್

ತಂದೆಯ ಹೆಸರು : ಸಿದ್ದಗಂಗಪ್ಪ

ವಯಸ್ಸು : 44ವರ್ಷ

ಉದ್ಯೋಗ : ಮುಖ್ಯಪೇದೆ

ವಾಸ : ಮಲ್ಲೈ ಮಹದೇಶ್ವರ ಬೆಟ್ಟ, ಚಾಮರಾಜನಗರ

ಸಾಕ್ಷಿಗೆ ದಿನಾಂಕಃ 10.08.2026ರಂದು ವಿ.ಸಿ ಮೂಲಕ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2016 ರಿಂದ 2020ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿನಾಂಕಃ 24.06.2018 ರಂದು ಮಃ 02.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-5ರವರು ಚಾಸಾ-1ರವರ ಜೊತೆ ನಮ್ಮ ಇಲಾಖಾ ಜೀಪ್ ನಂಃ KA-10-G-487ರಲ್ಲಿ ಉಡಿಗಾಲ ಗ್ರಾಮದ ಕಡೆ ಗಸ್ತಿಗೆ ತೆರಳಿದ್ದಾಗ, ಚಾಸಾ-1ರವರ ಮೊಬೈಲಿಗೆ ಕರೆ ಮಾಡಿ ಉತ್ತುವಳ್ಳಿ ರಸ್ತೆಯಲ್ಲಿ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯದ ಪೌಚ್‌ಗಳ ನ್ನು ಸಾಗಾಟ ಮಾಡುತ್ತಿರುವ ಮಾಹಿತಿ ಬಂದಿರುತ್ತದೆ, ಆಗ ಚಾಸಾ-1ರವರು ನಮ್ಮಗಳನ್ನು ಕರೆದುಕೊಂಡು ಪರಿಶೀಲಿಸಲು ಅಲ್ಲಿಗೆ ತೆರಳಿದೇವು, ಆಗ ಉತ್ತುವಳ್ಳಿ ಬಳಿಯಿದ್ದ ಚಾಸಾ-2 ಮತ್ತು 3ರವರಿಗೆ ಭಾತ್ಮೀಯ ವಿಚಾರವನ್ನು ತಿಳಿಸಿ, ಅವರು ಪಂಚರಾಗಲು ಒಪ್ಪಿಕೊಂಡಿದ್ದರಿಂದ ಅವರನ್ನು ಕರೆದುಕೊಂಡು ಉತ್ತುವಳ್ಳಿ ಬಸ್ ನಿಲ್ದಾಣದ ಬಳಿ ಬಂದೇವು. ಆಗ ಅಲ್ಲಿ ಒಬ್ಬ ಆಸಾಮಿಯು ಕೈಯಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು

ಹಿಡಿದುಕೊಂಡು ನಿಂತಿದ್ದ. ಆಗ ಸಮಯ 03.00 ಗಂಟೆ ಆಗಿತ್ತು. ಸದರಿ ವ್ಯಕ್ತಿಯನ್ನು ಹಿಡಿದು ಆತನ ಹೆಸರು ಕೇಳಿದಾಗ ಆತನ್ನು ತನ್ನ ಹೆಸರನ್ನು ಮರಂಕನಾಯ್ಕ ಬಿನ್ ಚಿಕ್ಕೂಸಯ್ಯ, ಹರವೆ ಗ್ರಾಮ ಎಂದು ತಿಳಿಸಿದ. ಆತನು ಹಿಡಿದಿದ್ದ ಕವರನ್ನು ತೆರೆದು ನೋಡಿದಾಗ ಅದರಲ್ಲಿ 180 ಎಂ.ಎಲ್ ನ 6 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕೀಯ ಮದ್ಯ ತುಂಬಿರುವ ಪೌಚ್ ಗಳು ಮತ್ತು 90 ಎಂ.ಎಲ್ ನ ಒಟ್ಟು 20 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕೀಯ ಪೌಚ್ ಗಳಿದ್ದವು, ಅವುಗಳ ಮೇಲಿದ್ದ ವಿವರಗಳನ್ನು ತಿಳಿದುಕೊಂಡೇವು. ಆಗ ಎಲ್ಲಾ ಮದ್ಯದ ಪೌಚ್‌ಗಳನ್ನು ಕವರ್ ಸಮೇತ ಅಮಾನತ್ತುಪಡಿಸಿಕೊಂಡು ಮದ್ಯದ ಪೌಚ್‌ಗಳನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದಕ್ಕೆ ಹೆಚ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ ಆರೋಪಿಯನ್ನು ಮತ್ತು ಎಲ್ಲಾ ಮದ್ಯದ ಪೌಚ್‌ಗಳನ್ನು ಹಾಗೂ ಪ್ಲಾಸ್ಟಿಕ್ ಕವರನ್ನು ಅಮಾನತ್ತುಪಡಿಸಿಕೊಂಡು ಮಃ 03.15 ರಿಂದ 04 ಗಂಟೆಯವರೆಗೆ ಮಹಜರ್ ಮಾಡಿದೇವು.

ಸದರಿ ಮಹಜರ್ ಗೆ ತನ್ನ ಸಹಿ ಹಾಕಿರುತ್ತೇನೆ ಎಂದು ಹೇಳಿ ಸಾಕ್ಷಿಯು ನಿಪಿ-1 ಮಹಜರ್ ಅನ್ನು ನೋಡಿ ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಓ-1 ರಿಂದ 26 ಮದ್ಯದ ಪೌಚ್‌ಗಳನ್ನು ಮತ್ತು 27 ಪ್ಲಾಸ್ಟಿಕ್ ಕವರನ್ನು ನೋಡಿ ಗುರ್ತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ದಿನಾಂಕಃ 24.06.2018 ರಂದು ಮಃ 02.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-5ರವರು ಚಾಸಾ-1ರವರ ಜೊತೆ ನಮ್ಮ ಇಲಾಖಾ ಜೀಪ್ ನಂಃ KA-10-G-487ರಲ್ಲಿ ಉಡಿಗಾಲ ಗ್ರಾಮದ ಕಡೆ ಗಸ್ತಿಗೆ ತೆರಳಿದ್ದಾಗ, ಚಾಸಾ-1ರವರ ಮೊಬೈಲಿಗೆ ಕರೆ ಮಾಡಿ ಉತ್ತುವಳ್ಳಿರಸ್ತೆಯಲ್ಲಿ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯದ ಪೌಚ್‌ಗಳ ನ್ನು

ಸಾಗಾಟ ಮಾಡುತ್ತಿರುವ ಮಾಹಿತಿ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ-1ರವರು ನಮ್ಮಗಳನ್ನು ಕರೆದುಕೊಂಡು ಪರಿಶೀಲಿಸಲು ಅಲ್ಲಿಗೆ ತೆರಳಿದೇವು, ಆಗ ಉತ್ತುವಳ್ಳಿ ಬಳಿಯಿದ್ದ ಚಾಸಾ-2 ಮತ್ತು 3ರವರಿಗೆ ಭಾತ್ಮೀಯ ವಿಚಾರವನ್ನು ತಿಳಿಸಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಅವರು ಪಂಚರಾಗಲು ಒಪ್ಪಿಕೊಂಡಿದ್ದರಿಂದ ಅವರನ್ನು ಕರೆದುಕೊಂಡು ಉತ್ತುವಳ್ಳಿ ಬಸ್ ನಿಲ್ದಾಣದ ಬಳಿ ಬಂದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಅಲ್ಲಿ ಒಬ್ಬ ಆಸಾಮಿಯು ಕೈಯಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಹಿಡಿದುಕೊಂಡು ನಿಂತಿದ್ದ. ಆಗ ಸಮಯ 03.00 ಗಂಟೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ವ್ಯಕ್ತಿಯನ್ನು ಹಿಡಿದು ಆತನ ಹೆಸರು ಕೇಳಿದಾಗ ಆತನ್ನು ತನ್ನ ಹೆಸರನ್ನು ಮರಂಕನಾಯ್ಕ ಬಿನ್ ಚಿಕ್ಕೂಸಯ್ಯ, ಹರವೆ ಗ್ರಾಮ ಎಂದು ತಿಳಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆತನು ಹಿಡಿದಿದ್ದ ಕವರನ್ನು ತೆರೆದು ನೋಡಿದಾಗ ಅದರಲ್ಲಿ 180 ಎಂ.ಎಲ್ ನ 6 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕೀಯ ಮದ್ಯ ತುಂಬಿರುವ ಪೌಚ್ ಗಳು ಮತ್ತು 90 ಎಂ.ಎಲ್ ನ ಒಟ್ಟು 20 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕೀಯ ಪೌಚ್ ಗಳಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳ ಮೇಲಿದ್ದ ವಿವರಗಳನ್ನು ತಿಳಿದುಕೊಂಡೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಎಲ್ಲಾ ಮದ್ಯದ ಪೌಚ್‌ಗಳನ್ನು ಕವರ್ ಸಮೇತ ಅಮಾನತ್ತುಪಡಿಸಿಕೊಂಡು ಮದ್ಯದ ಪೌಚ್‌ಗಳನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದಕ್ಕೆ ಹೆಚ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯನ್ನು ಮತ್ತು ಎಲ್ಲಾ ಮದ್ಯದ ಪೌಚ್‌ಗಳನ್ನು ಹಾಗೂ ಪ್ಲಾಸ್ಟಿಕ್ ಕವರನ್ನು ಅಮಾನತ್ತುಪಡಿಸಿಕೊಂಡು ಮಃ 03.15 ರಿಂದ 04 ಗಂಟೆಯವರೆಗೆ ಮಹಜರ್

ಮಾಡಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.